

ರಾಮಾಂಜಿನಿ ಬಹಳ ಹೊತ್ತಿನಿಂದ ಅನಿವಾರ್ಯವಾಗಿ ತಡೆಹಿಡಿದಿದ್ದ ದೇಹಬಾಧೆ ತೀರಿಸಿಕೊಳ್ಳಲು ಈ ಸನ್ನಿವೇಶ ನೆರವಾಯಿತು. ಗೊಂದಲದ ವಾತಾವರಣದಿಂದಾಗಿ ಆತ ಕಲಾವಿದರ ಹಿಂಡು ಅಗಲಿ ಹೊರನಡೆದದ್ದು ಯಾರ ಗಮನಕ್ಕೂ ಬರುವಂತಿರಲಿಲ್ಲ. ಹನುಮನ ಶೌರ್ಯದ ಚೀತ್ಕಾರ ಕಿವಿಯಿಂದ ಮರೆಯಾಗುವವರೆಗೂ ನಿಧಾನವಾಗಿ ಹೆಜ್ಜೆ ಹಾಕಿದ ರಾಮಾಂಜಿನಿ ಆ ಗುಡ್ಡದ ಅಥವಾ ಬದುಕಿನ ಮತ್ತೊಂದು ಎತ್ತರ ಹತ್ತಿದ್ದ. ಅಲ್ಲಿ ನಿಂತು ತನ್ನನ್ನು ನಿನ್ನೆ ಹಗಲಿಡೀ ಎಡತಾಕಿಸಿದ ಊರು ನೋಡುವ ಕುತೂಹಲ ಅವನದು.

ಅರೇ! ಅಲ್ಲಿ ಆ ಊರು, ಆ ಜನ, ಆ ಮನೆ ಯಾವುದೂ ಇಲ್ಲ! ಎಲ್ಲಿ ನೋಡಿದರೂ ನೀರು. ಸುತ್ತಲಿನ ಹಳ್ಳಿಗರ ಬದುಕು ಹಸನುಗೊಳಿಸುವ ನೆಪದಲ್ಲಿ ಕಾರ್ಖಾನೆಯ ಬಳಕೆಗಾಗಿಯೇ ಮಾಲೀಕರು ಕಟ್ಟಿಸಿದ್ದ ಅಣೆಕಟ್ಟೆ ಒಡೆದುಹೋಗಿತ್ತು. ನಿನ್ನೆ ತನಕ ಶಾಶ್ವತವೆಂದು ಭಾವಿಸಿದ್ದ ಎಲ್ಲವೂ, ಎಲ್ಲರೂ ನೀರು ಪಾಲು. ಆ ಪ್ರದೇಶದಲ್ಲಿ ಉಳಿದದ್ದು ಭೈರಪ್ಪ ತಾತನ ಗುಡ್ಡ ಮಾತ್ರ.

ರಾಮಾಂಜಿನಿಯ ಮನದೊಳಗೆ ತನ್ನ ಭ್ರಮೆ ಬಗ್ಗೆ ಹುಚ್ಚು ನಗೆ ಉಕ್ಕಿ ಬಂತು. ಇಲ್ಲಿ ಕಾಣುತ್ತಿರುವುದು ತಾನು ಎದ್ದುಬಂದಾಗ ನಡೆಯುತ್ತಿದ್ದ ರಾಮಾಯಣದ ಸೀಮೋಲ್ಲಂಘನ ಪ್ರಸಂಗದ ಸಮುದ್ರದ ನೀರು ಎಂದು ತನ್ನನ್ನು ತಾನು ನಂಬಿಸಿಕೊಳ್ಳಲು ಶತಪ್ರಯತ್ನ ಮಾಡಿದ. ತೊಡೆ ಚಿವುಟಿಕೊಂಡು ಎಚ್ಚರಗೊಳ್ಳುವ ಪ್ರಯತ್ನವೂ ವಿಫಲವಾಯ್ತು. ಕೊನೆಕೊನೆಗೆ ಭಯಭೀತನಾಗಿ ಗುಡ್ಡದ ಕೆಳಗೆ ದೃಷ್ಟಿ ಹೊರಳಿಸಲೂ ಹಿಂಜರಿಯತೊಡಗಿದ. ಆಕಾಶ ಹೊರತುಪಡಿಸಿ ಯಾವ ಕಡೆ ನೋಟ ಬೀರಿದರೂ ನೀರೇನೀರು. ಕ್ರಮೇಣ ಆಕಾಶ ಆವರಿಸಿದ ನೀಲಿಯೂ ನೆಲ ಕಬಳಿಸಿದ ನೀಲಿಯೂ ಒಂದೇ ಎಂಬಂತೆ ಕಾಣತೊಡಗಿ ರಾಮಾಂಜಿನಿಯ ಅಂಜಿಕೆ ರೋಮಾಂಚನವಾಗಿ ಬದಲಾಯಿತು.

ಹಂತಹಂತವಾಗಿ ಊರು ಮುಳುಗಿಸಿದ ಜಲರಾಶಿ ನಿಧಾನವಾಗಿ ಕಾಡುಮೇಡು ಕಬಳಿಸುತ್ತ ಇನ್ನೇನು ಅತಿ ಎತ್ತರದ ಭೈರಪ್ಪನ ಗುಡ್ಡವನ್ನೂ ನುಂಗಲಿದೆ ಎಂಬ ಅರಿವು ಮೂಡುತ್ತಲೇ ರಾಮಾಂಜಿನಿಯದು ಒಳಗು ಹೊರಗು ಒಂದೇ ಆದ ಸ್ಥಿತಿ. ಅದೊಂಥರಾ ದುಃಖ, ಬೆರಗು, ಬೆದರಿಕೆ, ಉನ್ಮಾದ... ಎಲ್ಲವೂ ಬೆರೆತ ಅಥವಾ ಎಲ್ಲವೂ ಮರೆತ ಶೂನ್ಯ. ಒಂದು ಹಂತ ಕೆಳಗಿದ್ದ ತಂಡದ ಸದಸ್ಯರು ಈಗಾಗಲೇ ನೀರುಪಾಲಾಗಿದ್ದರು. ಇನ್ನು ಕೆಲ ಘಳಿಗೆಗಳಷ್ಟೇ ಬಾಕಿ; ತಾನು ನಿಂತ ಗುಡ್ಡದ ತುತ್ತತುದಿಗೂ ನೀರು ನಾಲಗೆ ಚಾಚಲಿದೆ ಎಂಬ ಬಿಡುಗಡೆಯ ಭಾವದಲ್ಲಿ ರಾಮಾಂಜಿನಿ ನಿಶ್ಚಿಂತನಾದ.

**ಚಂದ್ರಕಾಂತ ವಡ್ಡು**

ಮೂಲತಃ ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ವಡ್ಡು ಗ್ರಾಮ. ಈಗ ಬೆಂಗಳೂರಿನಲ್ಲಿ ವಾಸ. ವೃತ್ತಿಯಿಂದ ಪತ್ರಕರ್ತ. 'ಲಂಕೇಶ್ ಪತ್ರಿಕೆ'ಯಿಂದ ವೃತ್ತಿ ಆರಂಭಿಸಿ 'ಸಂಯುಕ್ತ ಕರ್ನಾಟಕ' ಬಳಗದ 'ಕಸ್ತೂರಿ', 'ಕರ್ಮವೀರ' ಪತ್ರಿಕೆಗಳಲ್ಲಿ ಉಪ ಸಂಪಾದಕರಾಗಿದ್ದರು. ಸ್ವತಂತ್ರವಾಗಿ 'ಬಿಸಿಲ ಬದುಕು' ಮಾಸಿಕ ಮತ್ತು 'ದಾರಿ' ವಾರಪತ್ರಿಕೆಗಳ ಸಂಪಾದನೆ, ಪ್ರಕಟಣೆಯ ಹೊಣೆ.

'ನಾರಿಹಳ್ಳದ ದಂಡೆಯಲ್ಲಿ' (ಪ್ರಕಟಿತ ಕಥಾಸಂಕಲನ). 'ಮಹಾತ್ಮಾ ಗಾಂಧಿ' ಕುರಿತ ಅನುವಾದಿತ ಕೃತಿ ಪ್ರಕಟಿಸಿದ್ದಾರೆ. 'ನೇಪಥ್ಯದ ನೋವು' ಕತೆಗೆ 'ಪ್ರಜಾವಾಣಿ' ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಬಂದಿದೆ. ಪ್ರಸ್ತುತ ಬೆಂಗಳೂರಿನಿಂದ ಪ್ರಕಟವಾಗುತ್ತಿರುವ 'ಚಿಂತನಶೀಲ ಸಮಾಜಮುಖಿ' ಮಾಸಪತ್ರಿಕೆಯ ಸಂಪಾದಕ.